Misc.70/2020
AW-1

ದಿನಾಂಕ 07.11.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ- 4 ನೇ ಎದುರುದಾರರ ಪರವಾಗಿ ಶ್ರೀ. ಪ್ರಭುಸ್ವಾಮಿ ವಕೀಲರಿಂದ -

1. ನನ್ನ ನಾದಿನಿಯಾದ ರೂಪಾ ರವರು ಮಗುವನ್ನು ತನ್ನ ವಶಕ್ಕೆ ಕೊಡಬೇಕು ಎಂದು ಹೇಳಿ ಆಕೆಯ ಅತ್ತೆ ಮತ್ತು ಮಾವನ ವಿರುದ್ಧ G and W 1/2019 ಎಂಬ ಪ್ರಕರಣವನ್ನು ಮಾಡಿದ್ದರು ಮತ್ತು ನಂತರ ಆ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ G and W 1/2019 ಪ್ರಕರಣವನ್ನು ರಾಜಿ ಮಾಡಿಕೊಂಡ ದಿನದಂದು ನಾನು, ನನ್ನ ನಾದಿನಿಯಾದ ರೂಪಾ ಮತ್ತು ರೂಪಾ ರವರ ಅತ್ತೆ ಮತ್ತು ಮಾವ ಎಲ್ಲರೂ ನ್ಯಾಯಾಲಯಕ್ಕೆ ಬಂದಿದ್ದೆವು ಎಂದರೆ ನಾನು ಬಂದಿರಲಿಲ್ಲ. ಸದರಿ G and W 1/2019 ಪ್ರಕರಣವು ರಾಜಿ ಸಂಧಾನದ ಮೂಲಕ ಮುಕ್ತಾಯ ಆದ ನಂತರ ಮಾನ್ಯ ನ್ಯಾಯಾಧೀಶರು ನಮ್ಮೆಲ್ಲರನ್ನೂ ಒಟ್ಟಿಗೆ ನಿಲ್ಲಿಸಿ ಮತ್ತು ತಾವು ಸಹಾ ನಿಂತುಕೊಂಡು ಒಂದು ಛಾಯಾಚಿತ್ರ (photo) ವನ್ನು ತೆಗೆಸಿದರು ಎಂದರೆ ನಾನು ಅಲ್ಲಿ ಇರಲಿಲ್ಲ.

2. ಆತ್ಮಾನಂದ ರವರು ನನ್ನ ಷಡ್ಡಕ (co brother) ಆಗಿದ್ದಾರೆ. ಆತ್ಮಾನಂದನ ವಿರುದ್ಧ ಆತನ ಹಿರಿಯ ಸಹೋದರಿಯು ಆಸ್ತಿಗಳ ವಿಭಾಗಕ್ಕಾಗಿ O.S. 64/2020 ಎಂಬ ಒಂದು ದಾವೆಯನ್ನು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. O.S. 64/2020 ರಲ್ಲಿ ವಕೀಲರಾದ ಪ್ರಭುಸ್ವಾಮಿ ರವರು ಆತ್ಮಾನಂದನ ಪರವಾಗಿ ವಕಾಲತ್ತು ಹಾಕಿದ್ದರು ಮತ್ತು ಆ ಪ್ರಕರಣವು ಇವತ್ತಿಗೂ ನಡೆಯುತ್ತಾ ಇದೆ ಎಂದರೆ ನನಗೆ ಗೊತ್ತಿಲ್ಲ.

3. ನನ್ನ ನಾದಿನಿಯಾದ ರೂಪಾ ರವರು P and SC 13/2018 ಎಂಬ ಪ್ರಕರಣವನ್ನು ಮಾಡಿದ್ದರು ಮತ್ತು ಅದನ್ನು ರಾಜಿ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

4. ನನ್ನ ನಾದಿನಿಯಾದ ರೂಪಾ ರವರು ಮಂಡ್ಯದ JMFC ನ್ಯಾಯಾಲಯದಲ್ಲಿ PCR 111/2020 ಎಂಬ ಪ್ರಕರಣವನ್ನು ಮಮತಾ ಮತ್ತು ರಾಜು ರವರ ವಿರುದ್ಧ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

5. ನನ್ನ ನಾದಿನಿ ರೂಪಾ ಮತ್ತು ನನ್ನ co brother ಆದ ಆತ್ಮಾನಂದ ರವರು ಮೇಲೆ ಹೇಳಿದ ಪ್ರಕರಣವನ್ನು ಮಾಡಿದಾಗ ಸದರಿ ರೂಪಾ ಮತ್ತು ಅತ್ಮಾನಂದ ಮತ್ತು ನಾನು ಎಲ್ಲರೂ ಒಟ್ಟಿಗೆ ವಕೀಲರಾದ ಪ್ರಭುಸ್ವಾಮಿ ರವರನ್ನು ಭೇಟಿ ಮಾಡಿದ್ದೇವೆ ಮತ್ತು ನಾವೇ ಮಾಹಿತಿಯನ್ನು ಕೊಟ್ಟಿದ್ದೇವೆ ಎಂದರೆ ಸುಳ್ಳು.

6. ಈಗ ಸಾಕ್ಷಿಗೆ ಇದೇ ಪ್ರಕರಣದಲ್ಲಿ ದಿಃ 07.04.2021 ರಂದು ಇದೇ ಸಾಕ್ಷಿದಾರರು ಹಾಕಿದ್ದಾರೆ ಎಂದು ತೋರಿಸಿರುವ ಸಾಕ್ಷಿ ಪ್ರಮಾಣ ಪತ್ರವನ್ನು ಈ ಸಾಕ್ಷಿಗೆ ತೋರಿಸಿ ನಂತರ ವಕೀಲರು " ಇದರಲ್ಲಿ ಇರುವ ಸಹಿಗಳು ನಿಮ್ಮ ಸಹಿಗಳು ಆಗಿವೆ " ಎಂಬುದಾಗಿ ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಸಾಕ್ಷಿಯು "**ಸುಳ್ಳು"** ಎಂದು ನುಡಿದಿದ್ದಾರೆ.

7. **ಸೂಚನೆ -1-** ಈಗ ಈ ಸಾಕ್ಷಿದಾರರಿಗೆ ಮತ್ತೊಂದು ದಾಖಲೆಯನ್ನು ಅಂದರೆ ಇದೇ ಪ್ರಕರಣದಲ್ಲಿ ಇದೇ ಸಾಕ್ಷಿದಾರರು ಇದೇ ನ್ಯಾಯಾಧೀಶರ ಮುಂದೆ ದಿಃ 04.09.2024 ರಂದು ಹಾಕಿರುವ ಸಾಕ್ಷಿ ಪ್ರಮಾಣ ಪತ್ರವನ್ನು ತೋರಿಸಿ ನಂತರ ವಕೀಲರು "ಈ ದಾಖಲೆಯಲ್ಲಿ ನಿಮ್ಮ ಸಹಿಗಳು ಇವೆಯೋ ಹೇಗೆ" ಎಂದು ಪ್ರಶ್ನೆ ಕೇಳಿದ್ದಾರೆ. ಆದರೆ ಈ ಸಾಕ್ಷಿದಾರರು " ಈ ದಾಖಲೆಯಲ್ಲಿ ನನ್ನ ಸಹಿಗಳು ಇರುವುದಿಲ್ಲ " ಎಂದು ನುಡಿದಿದ್ದಾರೆ

8. **ಸೂಚನೆ-2-** ದಿಃ 04.09.2024 ರಂದು ಈ ಸಾಕ್ಷಿದಾರರು ಹಾಕಿರುವ ಸಾಕ್ಷಿ ಪ್ರಮಾಣ ಪತ್ರದ ಮೇಲೆ ಮುನ್ನೆಚ್ಚರಿಕಾ ಕ್ರಮವಾಗಿ ಇದೇ ನ್ಯಾಯಾಧೀಶರು ಈ ಸಾಕ್ಷಿಯ ಫೋಟೋವನ್ನು ಅಂಟಿಸಬೇಕು ಎಂದು ಸೂಚಿಸಿದ್ದರು ಮತ್ತು ಅದೇ ಪ್ರಕಾರವಾಗಿ ಈ ಸಾಕ್ಷಿಯ ಫೋಟೋವನ್ನು ಆ ಸಾಕ್ಷಿ ಪ್ರಮಾಣ ಪತ್ರದ ಮೇಲೆ ಅಂಟಿಸಲಾಗಿದೆ ಮತ್ತು ಆ ಸಾಕ್ಷಿ ಪ್ರಮಾಣ ಪತ್ರದ ಮೇಲೆ AW.1- ENQUIRY ON IA 2 ಎಂದು ಬರೆದು ನಂತರ ನ್ಯಾಯಾಧೀಶರು ತಮ್ಮ ಸಹಿಯನ್ನು ಹಾಕಿದ್ದಾರೆ.

9. **ಸೂಚನೆ-3-** ಈಗ ಸಾಕ್ಷಿಯು ದಿಃ 04.09.2024 ರಂದು ಸಲ್ಲಿಸಿರುವ ಸಾಕ್ಷಿ ಪ್ರಮಾಣ ಪತ್ರವನ್ನು ಓದಿ ನಂತರ ತಾವು ಉತ್ತರ ಹೇಳಲು ಇಚ್ಛೆ ಪಡೆಯುತ್ತೇನೆ ಎಂದು ನುಡಿದಿದ್ದಾರೆ. ನಂತರ ಸದರಿ ದಿಃ 04.09.2024 ರಂದು ಈ ಸಾಕ್ಷಿದಾರರು ಹಾಕಿರುವ ಸಾಕ್ಷಿ ಪ್ರಮಾಣ ಪತ್ರವನ್ನು ಈ ಸಾಕ್ಷಿಗೆ ಕೊಡಲಾಯಿತು ನಂತರ ಈ ಸಾಕ್ಷಿಯು ಅದನ್ನು ಓದಿ ನಂತರ " ಈ ದಾಖಲೆಯಲ್ಲಿ ನನ್ನ ಸಹಿಗಳು ಇರುವುದಿಲ್ಲ " ಎಂದು ನುಡಿದಿದ್ದಾರೆ.

Misc.70/2020
AW-1

ಮರು ವಿಚಾರಣೆ – ಇಲ್ಲ

ಈ ಸಾಕ್ಷಿದಾರರ ಹೇಳಿಕೆಯನ್ನು ಈ ಸಾಕ್ಷಿದಾರರಿಗೆ ಓದಿ ಹೇಳಿದ ನಂತರ ಈ ಸಾಕ್ಷಿದಾರರು ಸದರಿ ಪ್ರಮಾಣ ಪತ್ರದ ನಂತರ ಇರುವ deposition sheet ಗಳಲ್ಲಿ ಇರುವ LTM ಗಳು ತಮ್ಮ LTM ಗಳು ಆಗಿವೆ ಎಂದು ನುಡಿದಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.